# ಗ್ರಂಥಾಲಯಗಳಿಗೆ ಪುಸ್ತಕಗಳ ಆಯ್ಕೆ ಹೇಗಿರಬೇಕು? ಯಾರು ಮಾಡಬೇಕು?

**ಎಂ. ಎಸ್. ಶ್ರೀಧರ್**

**ವಿಳಾಸ:** ಫ್ಲಾಟ್ ೨ಸಿ, ಅಂತರಿಕ್ಷ ಅಪಾರ್ಟ್‌ಮೆಂಟ್, ನಂ. ೧೦೧/ ೫, ೧೧ನೆ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–೫೬೦೦೦೩ **ದೂರವಾಣಿ:** ೨೩೩೧೩೧೧೬/ ೯೮೪೫೬೨೯೪೨೪

**ಇ–ಮೇಲ್:** mirlesridhar@gmail.com

---

***ಸಾರಾಂಶ:*** ಗ್ರಂಥಾಲಯದ ಆತ್ಮವಾದ ಪುಸ್ತಕ ಸಂಗ್ರಹಣೆಯ ಗುಣಮಟ್ಟ ಪುಸ್ತಕಗಳ ಆಯ್ಕೆಯನ್ನು ಅವಲಂಬಿಸಿರುತ್ತದೆ. ಇಂತಹ ಗುರುತರ ಜವಾಬ್ದಾರಿಯನ್ನು ಯಾರು ವಹಿಸಿಕೊಳ್ಳಬೇಕು, ಗ್ರಂಥಾಲಯ ಪುಸ್ತಕ ಖರೀದಿಯನ್ನು ಪುಸ್ತಕೋದ್ಯಮ ಹೇಗೆ ತನ್ನ ಲಾಭಕ್ಕಾಗಿ ಬಳಸಿಕೊಳ್ಳುತ್ತಿದೆ, ಈ ಪ್ರಕ್ರಿಯೆಯಲ್ಲಿ ಗ್ರಂಥಪಾಲಕನ, ಸಮಿತಿಯ ಹಾಗೂ ಓದುಗನ ಪಾತ್ರಗಳನ್ನು ಅವಲೋಕಿಸುವುದರೊಂದಿಗೆ ಸಗಟು ಖರೀದಿಯ ಅಪಾಯವನ್ನು ಸೂಚಿಸುವ ಲೇಖನ, ಪುಸ್ತಕಗಳ ಉಪಯೋಗ ಮತ್ತು ಬೇಡಿಕೆಗಳ ಅಂಕಿಅಂಶಗಳ ಅಗತ್ಯವನ್ನು ತಿಳಿಸುತ್ತಾ ಇದರ ಹಿನ್ನೆಲೆಯಲ್ಲಿ ಗ್ರಂಥಾಲಯಗಳು ತಮ್ಮ ಕ್ಷಮತೆಯನ್ನು ಹೆಚ್ಚಿಸಿಕೊಳ್ಳಬಹುದೆಂದು ತಿಳಿಸುತ್ತದೆ.

***ಪ್ರಸ್ತಾವನೆ:*** ಹಲವಾರು ವರ್ಷಗಳಿಂದ ಸಾರ್ವಜನಿಕ ಗ್ರಂಥಾಲಯ ಇಲಾಖೆ ಅನುಸರಿಸುವ ಪುಸ್ತಕಗಳ ಆಯ್ಕೆ ಮತ್ತು ಸಗಟು ಖರೀದಿ ನೀತಿಯ ಬಗ್ಗೆ ಗಂಭೀರ ಆರೋಪಗಳಿವೆ. ವಿಚಿತ್ರವೆಂದರೆ ಸಾರ್ವಜನಿಕ ಗ್ರಂಥಾಲಯಗಳ ಇತರ ಕಾರ್ಯ, ಕರ್ತವ್ಯ ಮತ್ತು ಸೇವೆಗಳ ಬಗ್ಗೆಯಾಗಲಿ, ಖರೀದಿಸಿದ ಪುಸ್ತಕಗಳ ಉಪಯೋಗದ ಬಗ್ಗೆಯಾಗಲಿ ಅಷ್ಟು ಚರ್ಚೆ ಆದಂತಿಲ್ಲ. ಲೇಖಕರು (ಮುಖ್ಯವಾಗಿ ಸಾಹಿತಿಗಳು), ಪ್ರಕಾಶಕರು, ವಿತರಕರು ಮತ್ತು ಮಾರಾಟಗಾರರು ಇಲಾಖೆಯ ಆಯ್ಕೆ, ಆಯ್ಕೆ ಸಮಿತಿ ಮತ್ತು ಗ್ರಂಥಾಧಿಕಾರಿಗಳ ಕಾರ್ಯವೈಖರಿಯ ಬಗ್ಗೆ ಸಾಕಷ್ಟು ದೂರಿದ್ದಾರೆ. ಇವೆಲ್ಲವನ್ನೂ ಗಮನಿಸಿದರೆ ಸಾರ್ವಜನಿಕ ಗ್ರಂಥಾಲಯಗಳಿಗೆ ಪುಸ್ತಕ ಆಯ್ಕೆ ಮಾಡುವ ಪ್ರಕ್ರಿಯೆಗಾಗಿ ಸಾಕಷ್ಟು ಪೈಪೋಟಿ ನಡೆದಿರುವಂತೆ ತೋರುತ್ತದೆ. ಪುಸ್ತಕಗಳ ಆಯ್ಕೆ ಅಂತಿಮವಾಗಿ ಯಾರಿಂದ ಆಗಬೇಕು ಮತ್ತು ಆಯ್ಕೆಯ ಹೊಣೆ ಯಾರು ಹೊರಬೇಕು ಎಂಬುದನ್ನು ತೀರ್ಮಾನಿಸುವುದು ಸುಲಭವಲ್ಲದಿದ್ದರೂ ಅನಿವಾರ್ಯವಾಗಿ ನಿರ್ಧಾರವಾಗಬೇಕಿದೆ.

ನಮ್ಮ ದೇಶದಲ್ಲಿ ಮಾರಾಟವಾದ ಪುಸ್ತಕಗಳ ಪೈಕಿ ಸುಮಾರು ಶೇ ೨೫ ರಷ್ಟನ್ನು ಮಾತ್ರ ವ್ಯಕ್ತಿಗಳು ಖರೀದಿಸಿದರೆ ಮಿಕ್ಕ ಶೇ. ೭೫ ರಷ್ಟನ್ನು ಮುಖ್ಯವಾಗಿ ಗ್ರಂಥಾಲಯಗಳು ಖರೀದಿಸುತ್ತವೆ. ಆದರೆ ಅಮೆರಿಕಾದಲ್ಲಿ ಮಾರಾಟವಾದ ಪುಸ್ತಕಗಳ ಶೇ. ೯೫ ರಷ್ಟನ್ನ ವ್ಯಕ್ತಿಗಳು ಖರೀದಿಸುವುದಲ್ಲದೆ, ಉಳಿದ ಶೇ. ೫ ರಷ್ಟನ್ನು ಖರೀದಿಸಿದ ಗ್ರಂಥಾಲಯಗಳಿಂದ ಪುಸ್ತಕಗಳನ್ನು ಎರವಲು ಪಡೆದು ಬಳಸಿದ್ದು ನೇರವಾಗಿ ವ್ಯಕ್ತಿಗಳಿಗೆ ಮಾರಾಟವಾದ ಸಂಖ್ಯೆಗೆ (ಅಂದರೆ ಶೇ. ೯೫ ಕ್ಕೆ) ಸಮನಾಗಿರುತ್ತದೆ. ನಮ್ಮ ದೇಶದ ಶೇ ೨೫ರ ವ್ಯಕ್ತಿಗತ ಖರೀದಿಯಲ್ಲಿ ಶೇ ೨೧ ಇಂಗ್ಲೀಷ್ ಭಾಷೆ ಪುಸ್ತಕಗಳು ಮತ್ತು ಉಳಿದ ಶೇ ೪ ದೇಶೀ ಭಾಷಾ ಪುಸ್ತಕಗಳು. ವೈಯಕ್ತಿಕ ಪುಸ್ತಕ ಕೊಳ್ಳುವಿಕೆ ಗ್ರಾಮೀಣ ಪ್ರದೇಶದಲ್ಲಿ ಮತ್ತಷ್ಟು ಕಡಿಮೆ. ಇದರಿಂದಾಗಿ ಪುಸ್ತಗಳನ್ನು ಗ್ರಂಥಾಲಯಗಳಿಗೆ ಮಾರಾಟಮಾಡುವ ಪೈಪೋಟಿ ನಿರೀಕ್ಷಿತವಾದದ್ದೆ. ದೇಶದ ಪುಸ್ತಕೋದ್ಯಮದ ಒಟ್ಟು ೭೮ ಭಾಗ ಪುಸ್ತಕ ಪ್ರಕಟಣೆ ಇಂಗ್ಲೀಷ್, ಹಿಂದಿ, ತಮಿಳು, ಮರಾಠಿ ಬಂಗಾಳಿಯದ್ದಾಗಿದ್ದು ಉಳಿದ ಶೇ೨೨ ರ ಪೈಕಿ ಶೇ ೨.೬ ರಷ್ಟು ಕೊಡುಗೆ ಕನ್ನಡದ್ದಾಗಿದೆ. ಆದರೆ ದೇಶದ ಶೇ. ೧೦ ರಷ್ಟು ಪ್ರಕಾಶಕರು ನಮ್ಮಲ್ಲಿದ್ದಾರೆ. ವ್ಯಾಪಕ ವಿತರಣೆ ಮತ್ತು ಮಾರಾಟ ಕೆಲವೇ ಪ್ರತಿಷ್ಠಿತ ಪ್ರಕಾಶಕರಿಗೆ ಮಾತ್ರ ಸಾಧ್ಯವಾಗಿ ಕನ್ನಡ ಪುಸ್ತಕೋದ್ಯಮದ ಬಹಳಷ್ಟು ಪ್ರಕಾಶಕರು ಸಗಟು ಖರೀದಿಯನ್ನೇ ಅವಲಂಬಿಸಿದ್ದಾರೆ.

**ಗ್ರಂಥಾಲಯಗಳಿಗೆ ಪುಸ್ತಕಗಳ ಆಯ್ಕೆ:** ಸಾಮಾನ್ಯವಾಗಿ ಗ್ರಂಥಾಲಯಗಳಿಗೆ ಪುಸ್ತಕಗಳನ್ನು (ನೇರವಾಗಿ ಹಾಗೂ ಪರೋಕ್ಷವಾಗಿ) ಆಯ್ಕೆ ಮಾಡಬಹುದಾದವರನ್ನು ಮೂರು ವರ್ಗಗಳಲ್ಲಿ ಗುರುತಿಸಬಹುದು: (i) ಓದುಗರು (ii) ವಿಷಯ ತಜ್ಞರು ಮತ್ತು (iii) ಗ್ರಂಥಾಧಿಕಾರಿ / ಗ್ರಂಥಾಲಯ ಸಿಬ್ಬಂದಿ. ಲೇಖಕರನ್ನು ವಿಷಯ ತಜ್ಞರ ಗುಂಪಿಗೆ ಸೇರಿಸಬಹುದು.

ಗ್ರಂಥಾಲಯ ಪುಸ್ತಕ ಆಯ್ಕೆ ಸಮಿತಿ ಈ ಮೂರು ವರ್ಗಗಳ ಪ್ರತಿನಿಧಿಗಳನ್ನು ಹೊಂದಿರಬೇಕು. ಸಾಹಿತ್ಯವಲ್ಲದೆ ಇತರ ಹಲವಾರು ವಿಷಯಗಳ ಪುಸ್ತಕಗಳನ್ನೂ ಸಮಿತಿ ಆರಿಸಬೇಕಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ವಿಷಯಗಳ ತಜ್ಞರನ್ನು ಹೊಂದಿರುವುದು ಸೂಕ್ತ. ಆದರೂ, ಸಾಮಾನ್ಯವಾಗಿ ಎಲ್ಲ ವಿಷಯಗಳ ಮತ್ತು ಭಾಷೆಗಳ ತಜ್ಞರನ್ನು ಸಮಿತಿಯಲ್ಲಿ ಸೇರಿಸುವುದು ಸುಲಭ ಸಾಧ್ಯವಲ್ಲವಾದ್ದರಿಂದ ಪ್ರತಿನಿಧಿಗಳಿಲ್ಲದ ಭಾಷೆ ಮತ್ತು ವಿಷಯಗಳ ಪುಸ್ತಕಗಳ ಬಗ್ಗೆ ತಜ್ಞರಿಂದ ಸಲಹೆಗಳನ್ನು ಆಹ್ವಾನಿಸಿ ಸಮಿತಿ ಪರಿಗಣಿಸಬೇಕು.

ಸಾರ್ವಜನಿಕ ಗ್ರಂಥಾಲಯಗಳ ಪುಸ್ತಕ ಆಯ್ಕೆ ವಸ್ತುನಿಷ್ಠವಾಗಿ ಯಾವ ಮುಲಾಜೂ ಇಲ್ಲದೆ ಓದುಗರ ಅಭಿರುಚಿ ಮತ್ತು ಒಳಿತನ್ನಷ್ಟೇ ಗಮನದಲ್ಲಿಟ್ಟುಕೊಂಡು ಲಭ್ಯವಿರುವ ಸಂಪನ್ಮೂಲದ ಮಿತಿಯಲ್ಲಿ ಅತೀ ಹೆಚ್ಚು ಓದುಗರ ಅವಶ್ಯಕತೆಗಳನ್ನು ಪೂರೈಸುವಂತಾಗಿರಬೇಕು. ಅದು ಪಾರದರ್ಶಕವಾಗಿ ವಿಶ್ವಸರ್ಹತೆ ಮೂಡಿಸುವಂತಿರಬೇಕು. ***ಪಾರದರ್ಶಕತೆಗೆ ಒಂದು ಉದಾಹರಣೆ ಕೊಡುವುದಾದರೆ, ಗ್ರಂಥಾಲಯ ತನ್ನ ಇಂಟರ್‌ನೆಟ್ ತಾಣದಲ್ಲಿ ಸಮಿತಿ ಪರಿಗಣಿಸಿದ, ಪರಿಗಣಿಸಬೇಕಾದ, ತಿರಸ್ಕರಿಸಿದ ಮತ್ತು ಆಯ್ಕೆ ಮಾಡಿದ ಎಲ್ಲ ಪುಸ್ತಕಗಳ ಪಟ್ಟಿಯನ್ನು ಸತತ ಬಿತ್ತರಿಸುತ್ತಿರಬೇಕು.*** ಓದುಗರಿಗೆ ಪುಸ್ತಕಗಳ ಪಟ್ಟಿ (catalogue), ಸಮೀಕ್ಷೆಗಳು (reviews), ಗ್ರಂಥಪ್ರಶಂಸೆ (blurb), ಇತ್ಯಾದಿಗಳನ್ನು ಸಂಗ್ರಹಿಸಿ ಹೊಸ ಪುಸ್ತಕಗಳ ಬಗ್ಗೆ ಮಾಹಿತಿ ನೀಡಿ, ಪುಸ್ತಕಗಳ ಪರಿಶೀಲನೆಗೆ ಮುಕ್ತ ಅವಕಾಶ (ಪುಸ್ತಕ ಪ್ರದರ್ಶನ, ಮೇಳ, ಇತ್ಯಾದಿ) ಕಲ್ಪಿಸಿ, ಅವರಿಂದ ಸಲಹೆಗಳನ್ನು ಆಹ್ವಾನಿಸಿ, ಅಂತಹ ಓದುಗರ ಸಲಹೆ ಮತ್ತು ಬೇಡಿಕೆಗಳಿಗೆ ಅತ್ಯಂತ ಹೆಚ್ಚು ಆದ್ಯತೆ ನೀಡಬೇಕು. ವಾಸ್ತವದಲ್ಲಿ ಓದುಗರ ಸಲಹೆಗಳು ವಿರಳ, ಅವರು ತಮ್ಮ ಹಕ್ಕನ್ನು ಚಲಾಯಿಸುವುದಿಲ್ಲ, ಹೆಚ್ಚಿನ ಓದುಗರು ಪುಸ್ತಕ ಆಯ್ಕೆ ತಮ್ಮ ಜವಾಬ್ದಾರಿಯಲ್ಲವೆಂದು ಭಾವಿಸಿ ಅನಾಸಕ್ತರಾಗಿರುತ್ತಾರೆಂಬ ಕಾರಣದಿಂದ ಗ್ರಂಥ ಸಂಗ್ರಹಣ ಕಾರ್ಯದಲ್ಲಿ ಅತೀ ಮುಖ್ಯವಾದ ಈ ಆಯ್ಕೆಯ ಮಾರ್ಗವನ್ನು ಕಡೆಗಣಿಸದೆ ಗ್ರಂಥಾಲಯಗಳು ಪ್ರಾಮಾಣಿಕವಾಗಿ ಮತ್ತು ಪ್ರಯತ್ನ ಪೂರ್ವಕವಾಗಿ ಓದುಗರನ್ನು ಆಯ್ಕೆಯ ಪ್ರಕ್ರಿಯೆಯಲ್ಲಿ ಸೇರಿಸಿಕೊಳ್ಳಬೇಕು. ಇದಲ್ಲದೆ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವ ಪುಸ್ತಕ ವಿಮರ್ಶೆಗಳು ಆಯ್ಕೆಗೆ ಒಂದು ಮುಖ್ಯ ಆಧಾರವಾಗಬೇಕು.

ಪುಸ್ತಕ ಆಯ್ಕೆ ಸಮಿತಿಯ ಸದಸ್ಯತ್ವಕ್ಕಾಗಿ ಪ್ರಕಾಶಕ ಮತ್ತು ಪುಸ್ತಕ ಮಾರಾಟಗಾರರ ಸಂಘಗಳ ಪ್ರತಿನಿಧಿಗಳ ಮಧ್ಯೆಯೂ ಪೈಪೋಟಿ ಮತ್ತು ಜಟಾಪಟಿ ನಡೆದಿದೆ. ಪುಸ್ತಕಗಳ ಆಯ್ಕೆ ಮತ್ತು ಸಗಟು ಖರೀದಿ ಬಗ್ಗೆ ಹೆಚ್ಚು ಗದ್ದಲವೆಬ್ಬಿಸಿರುವ ಪ್ರಕಾಶಕರು, ವಿತರಕರು ಮತ್ತು ಪುಸ್ತಕ ವ್ಯಾಪಾರಿಗಳು ಆಯ್ಕೆಯಲ್ಲಿ ನೇರವಾಗಿ ಭಾಗವಹಿಸುವುದು ಅಷ್ಟು ಉಚಿತವಲ್ಲ. ಅವರು ನೇರವಾಗಿ ಸಮಿತಿಯ ಮೇಲೆ ಹಿಡಿತವಿಟ್ಟರೆ ಅಥವ ಪ್ರಭಾವ ಬೀರಿದರೆ ಸ್ಪರ್ಧಿಯೇ ತೀರ್ಪುಗಾರನಾದಂತಾಗುತ್ತದೆ. ಸಾಹಿತ್ಯೇತರ ಲೇಖಕರು ಅಷ್ಟಾಗಿ ಈ ಪ್ರತಿಭಟನೆಗಳಲ್ಲಿ ಭಾಗವಹಿಸಿದಂತೆ ತೋರುವುದಿಲ್ಲ. ವಿಚಿತ್ರವೆಂದರೆ ಸಾಹಿತಿಗಳನೇಕರು ತಮ್ಮನ್ನು ಹೆಚ್ಚಾಗಿ ಪುಸ್ತಕೋದ್ಯಮದೊಂದಿಗೆ ಗುರುತಿಸಿಕೊಂಡು ಪ್ರಕಾಶಕರ, ವಿತರಕರ ಮತ್ತು ಮಾರಾಟಗಾರರ ಅಭಿಪ್ರಾಯಗಳಿಗೆ ಬೇಷರತ್ ಬೆಂಬಲ ವ್ಯಕ್ತಪಡಿಸಿದ್ದಾರೆ. ಅನೇಕವೇಳೆ ಸಾಹಿತಿಗಳೇ ಸ್ವತಃ ಪ್ರಕಾಶಕರು ಮತ್ತು ಮಾರಾಟಗಾರರಾಗಿಯೂ ಇರುತ್ತಾರೆ. ಆಯ್ಕೆಯ ಸಮಿತಿಯಲ್ಲೂ ಸಾಹಿತಿಗಳಿಗೆ ಹೆಚ್ಚು ಆದ್ಯತೆ ಇದ್ದು ಸಾಹಿತ್ಯೇತರ ಲೇಖಕರ ಪ್ರಾತಿನಿಧ್ಯತೆ ಕಡಿಮೆ. ಏನೇ ಆದರೂ ಲೇಖಕರು ಮತ್ತು ಪ್ರಕಾಶಕರಿಂದ ಅರ್ಜಿಗಳನ್ನು ಆಹ್ವಾನಿಸಿ ಅದರೊಂದಿಗೆ ಶುಲ್ಕ ಅಥವ ಪುಕ್ಕಟೆ ಪ್ರತಿಗಳನ್ನು ತೆಗೆದುಕೂಂಡು, ಪುಸ್ತಕಗಳನ್ನು ಆಯ್ಕೆ ಮಾಡುವುದು ಗ್ರಂಥಾಲಯಗಳಿಗೆ ಶೋಭಿಸುವುದಿಲ್ಲ.

***ಗ್ರಂಥಾಧಿಕಾರಿಗಳ ಪಾತ್ರ :*** ಗ್ರಂಥಾಧಿಕಾರಿ ಮತ್ತು ಗ್ರಂಥಾಲಯ ಸಿಬ್ಬಂದಿ ಮಾಡಬಹುದಾದ ಪುಸ್ತಕಗಳ ಆಯ್ಕೆಯ ಬಗ್ಗೆ ಅಷ್ಟು ವಿಶ್ವಾಸವಿಲ್ಲ ಎಂಬುದು ಸಾಮಾನ್ಯವಾಗಿ ಕಾಣುತ್ತದೆ. ಗ್ರಂಥಪಾಲಕರು ಪುಸ್ತಕ ಆಯ್ಕೆ ಮಾಡಲು ಅನರ್ಹರು ಎಂಬುದನ್ನು ಸಾರ್ವತ್ರಿಕಗೊಳಿಸಿ ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು ಹೆಚ್ಚು ಉತ್ಪ್ರೇಕ್ಷೆಯೊಂದಿಗೆ ಹೇಳುವುದುಂಟು. ಗ್ರಂಥಪಾಲಕರು ವಿಷಯ ತಜ್ಞರೂ ಮತ್ತು ಅಪರೂಪಕ್ಕೆ ಲೇಖಕರೂ ಅಗಿರಬಹುದಾದರೂ ಅವರ ಆಯ್ಕೆಯಲ್ಲಿ ನಂಬಿಕೆ ಮತ್ತು ವಿಶ್ವಾಸ ಕಡಿಮೆ ಎನಿಸಿರುವುದರಿಂದ ಅವರು ಇತರ ವರ್ಗದವರಿಗೆ ಮತ್ತು ಸಮಿತಿಗೆ ಪುಸ್ತಕ ಆಯ್ಕೆಗೆ ಬೇಕಾಗುವ ಮಾಹಿತಿ ಮತ್ತು ಆಧಾರಗಳನ್ನು ಒದಗಿಸಿ ಕೊಡುವುದು ಮತ್ತು ಪುಸ್ತಕಗಳ ಆಯ್ಕೆಯನ್ನು ಸುಗಮಗೊಳಿಸಲು ಬೇಕಾದ ಪೂರ್ವ ಸಿದ್ದತೆಗಳಲ್ಲಿ ತೊಡಗಿಸಿಕೊಂಡು ಹಿನ್ನೆಲೆಯಲ್ಲಿರುವುದು ಸೂಕ್ತ. ಗ್ರಂಥಾಲಯಗಳಲ್ಲಿ ಈಗಾಗಲೆ ಇರುವ ಪುಸ್ತಕ ಸಂಗ್ರಹಣೆಯ ರೂಪುರೇಷೆ, ಭಾಷೆ ಮತ್ತು ವಿಷಯಗಳ ಪ್ರಾತಿನಿಧ್ಯತೆ, ಬೆಲೆಗಳ ಪರಿಶೀಲನೆ, ಬೇಕಾಗಬಹುದಾದ ಪ್ರತಿಗಳ ನಿರ್ಧಾರ, ಪುಸ್ತಕ ಪರಿಶೀಲನೆಗೆ ವ್ಯಾಪಕ ವ್ಯವಸ್ಥೆ, ಕಾಲಕಾಲಕ್ಕೆ ಸರ್ವೇಕ್ಷಣೆಗಳನ್ನು ನಡೆಸಿ ಓದುಗರ ಅವಶ್ಯಕತೆ–

ಅಭಿರುಚಿಗಳನ್ನು ಗುರುತಿಸುವುದು, ಓದುಗರ ಸಲಹೆಗಳನ್ನು ಆಹ್ವಾನಿಸಿ ಸಂಗ್ರಹಿಸುವುದು, ಎರವಲು ಸೇವೆಯಲ್ಲಿ ಈಗಾಗಲೆ ಉಪಯೊಗಿಸಿದ ಪುಸ್ತಕಗಳ ಅಂಕಿ ಅಂಶಗಳನ್ನು ಸಂಗ್ರಹಿಸಿ ಪರಿಷ್ಕರಿಸುವುದು, ಪ್ರಶಸ್ತಿ–ಪುರಸ್ಕಾರ ಪಡೆದ ಮತ್ತು ದಾಖಲೆ ಸೃಷ್ಟಿಸಿದ ಕೃತಿಗಳನ್ನು ಪಟ್ಟಿ ಮಾಡುವುದು, ಪರಾಮರ್ಶನ ಸೇವೆಯ ಬೇಡಿಕೆ ವಿಶ್ಲೇಷಿಸಿ ಬೇಕಾಗುವ ಸಂದರ್ಭ ಗ್ರಂಥಗಳನ್ನು ಗುರುತಿಸುವುದು, ಇತ್ಯಾದಿ ಕಾರ್ಯಗಳ ಮೂಲಕ ಗ್ರಂಥಪಾಲಕರು ಪುಸ್ತಕಗಳ ಆಯ್ಕೆಯಲ್ಲಿ ನೆರವಾಗಬಹುದಾದ ಸಾಧ್ಯತೆಗಳಿವೆ ಮತ್ತು ಅದು ಅವರ ಕರ್ತವ್ಯ ಕೂಡ. ಸಂಬಂಧ ಪಟ್ಟವರ ನಂಬಿಕೆ ವಿಶ್ವಾಸ ಗಳಿಸುವಂತೆ ಗ್ರಂಥಾಲಯ ಸೇವೆಯನ್ನು ಅಭಿವೃದ್ದಿಗೊಳಿಸುವುದು ಗ್ರಂಥಪಾಲಕರ ವೃತ್ತಿ ದೃಷ್ಠಿಯಿಂದ ಬಹಳ ಅವಶ್ಯಕ.

***ಎರಡು ಪ್ರಸಂಗಗಳು :*** ಮೇಲಿನ ಹಿನ್ನೆಲೆ ಕಾರ್ಯಗಳು ನೇರ ಪುಸ್ತಕ ಆಯ್ಕೆಯಲ್ಲಿ ಭಾಗವಹಿಸುವುದಕ್ಕಿಂತ ಮುಖ್ಯವಾದವುಗಳು ಮತ್ತು ಗ್ರಂಥಪಾಲಕರು ನಿರ್ವಹಿಸಲೇ ಬೇಕಾದವುಗಳು. ಪುಸ್ತಕಗಳ ಆಯ್ಕೆಯಲ್ಲಿ ಗ್ರಂಥಪಾಲಕರು ಮತ್ತು ಗ್ರಂಥಾಲಯ ಸಿಬ್ಬಂದಿಯ ಪಾತ್ರ ಎಷ್ಟೇ ಪರೋಕ್ಷವಾದರೂ ಅವು ಮುಖ್ಯವಾದುವುಗಳೆ. ವಿಚಿತ್ರವೆಂದರೆ ಪುಸ್ತಕಗಳ ಆಯ್ಕೆಯಲ್ಲಿ ಗ್ರಂಥಪಾಲಕರು ನೇರವಾಗಿ ಯಾವ ಪಾತ್ರವನ್ನೂ ವಹಿಸದೆಯೇ ಗ್ರಂಥಾಲಯಗಳಲ್ಲಿರುವ ಗ್ರಂಥ ಸಂಗ್ರಹ ದುರ್ಬಲ, ಅಸಂಬದ್ದ ಎಂದಾದರೆ ಈ ಜವಾಬ್ದಾರಿಯನ್ನು ಗ್ರಂಥಪಾಲಕರೇ ಹೊರಬೇಕಾಗುತ್ತದೆ. ಉದಾಹರಣೆಗೆ ಸಾರ್ವಜನಿಕ ಗ್ರಂಥಾಲಯಗಳು ಬೆಳೆಸಿದ ಪುಸ್ತಕ ಸಂಗ್ರಹ ದುರ್ಬಲ, ಹಳತು, ಅಪ್ರಯೋಜಕ, ಅಪ್ರಸ್ತುತ ಮತ್ತು ಕಳಪೆ ಎಂದು ಸರ್ವೇಕ್ಷಣೆಗಳು* ತೋರಿವೆಯಾದರೂ ಗ್ರಂಥಪಾಲಕರನ್ನೇ ಹೊಣೆಮಾಡಲಾಗುತ್ತದೆಯೆ ಹೊರತು ಸಮಿತಿಗಳನ್ನಲ್ಲ. ಆದರೆ ಎಷ್ಟೇ ಅಪನಂಬಿಕೆ ಮತ್ತು ಅವಿಶ್ವಾಸಕ್ಕೆ ಒಳಗಾದರೂ, ಗ್ರಂಥಪಾಲಕರು ಮತ್ತು ಸಿಬ್ಬಂದಿ ಈ ಮೇಲೆ ತಿಳಿಸಿದ ಪೂರಕ ಕಾರ್ಯಗಳನ್ನ ನಿರ್ವಹಿಸಲೇಬೇಕು. ಪುಸ್ತಕಗಳ ಆಯ್ಕೆಯ ಕಾರ್ಯಕ್ಕೆ 'ಅನರ್ಹ' ರೆಂದು ಪರಿಗಣಿಸಲ್ಪಟ್ಟಂತಹ ಪರಿಸ್ಥಿತಿ ನಿರ್ಮಾಣವಾಗಿದ್ದರೂ ಮಾಹಿತಿ ಮತ್ತು ಪುಸ್ತಕ ಆಯ್ಕೆಗೆ ಸಂಬಂದಿಸದಂತಹ ಎರಡು ಅಧ್ಯಯನಗಳ ಫಲಿತಾಂಶ (ಪ್ರಸಂಗ) ಗಳನ್ನು ಇಲ್ಲಿ ಗಮನಿಸಬಹುದು. ಮೊದಲನೆಯದಾಗಿ ಖ್ಯಾತ ಔಷದ ತಯಾರಿಕಾ ಸಂಸ್ಥೆಯೊಂದರ ಮುಖ್ಯಸ್ಥರು ಮಲೇಶಿಯಾದ ಔಷದ ಮಾರುಕಟ್ಟೆಯ ಸ್ಥಿತಿಗತಿಗಳ ಬಗ್ಗೆ ವರದಿಗಳನ್ನು ಪ್ರತ್ಯೇಕವಾಗಿ (ಒಬ್ಬರಿಗೆ ತಿಳಿಯದಂತೆ ಮತ್ತೊಬ್ಬರಿಂದ) ಹಿರಿಯ ಉಪಾದ್ಯಕ್ಷರು, ಮಾರುಕಟ್ಟೆ ನಿರ್ದೇಶಕರು ಮತ್ತು ಗ್ರಂಥಪಾಲಕರಿಂದ ತಯಾರಿಸುವಂತೆ ಆದೇಶಿಸಿ, ಆ ವರದಿಗಳನ್ನು ಯಾರು ತಯಾರಿಸಿದರು ಎಂಬುದನ್ನು ಗುಪ್ತವಾಗಿಟ್ಟು ಸಂಸ್ಥೆಯ ಮ್ಯಾನೇಜರುಗಳಿಗೆ ತೋರಿಸಿದಾಗ, ಗ್ರಂಥಪಾಲಕ ತಯಾರಿಸಿದ ವರದಿಯನ್ನು ಎಲ್ಲರೂ ಸಕಾರಣಗಳೊಂದಿಗೆ ಅತ್ಯಂತ ಉಪಯುಕ್ತ ಎಂದು ತಿಳಿಸಿದ್ದಾರೆ. ಎರಡನೆಯದಾಗಿ, ವಿಶಿಷ್ಟ ಗ್ರಂಥಾಲಯವೊಂದರ ಅಧ್ಯಯನದಲ್ಲಿ ಗ್ರಂಥಪಾಲಕನು ಆಯ್ಕೆ ಮಾಡಿದ ಪುಸ್ತಕಗಳು ಇತರರು ಆಯ್ಕೆಮಾಡಿದ ಪುಸ್ತಕಗಳಿಗಿಂತ ಹೆಚ್ಚು ಉಪಯೋಗಿಸಲ್ಪಟ್ಟಿವೆ ಎಂದು ತಿಳಿದು ಬಂದಿದೆ. ಈ ಎರಡೂ ಅಧ್ಯಯನಗಳು ಬೇರೆ ಬೇರೆ ಪರಿಸರಗಳಲ್ಲಿ ನಡೆದಿದ್ದಾದರೂ, ಅಲ್ಲಿಯ ಗ್ರಂಥಪಾಲಕನ ಕಾರ್ಯದಕ್ಷತೆ ಮತ್ತು ಅರ್ಹತೆಯ ಬಗ್ಗೆ ಪೂರ್ವಗ್ರಹಪೀಡಿತರಾಗಿ ಪರಿಗಣಿಸಬಹುದೆಂಬ ಸಂಶಯದಿಂದ ಆ ವಿಷಯವನ್ನು ಅಧ್ಯಯನಗಳಲ್ಲಿ ಗೌಪ್ಯವಾಗಿಡಲಾಗಿತ್ತು. ಆದ್ದರಿಂದ ಗ್ರಂಥಪಾಲಕರ ಅರ್ಹತೆಯ ಬಗೆಗಿನ ಅಪನಂಬಿಕೆ ಎಲ್ಲಡೆಯೂ ವ್ಯಾಪಕವಾಗಿದೆ ಎಂಬುದು ತಿಳಿಯುತ್ತದೆ.

***ಅಪಾಯಕಾರಿ ಸಗಟು ಖರೀದಿ ವ್ಯವಸ್ಥೆ :*** ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಕೇಂದ್ರೀಕೃತ (ಏಕಗವಾಕ್ಷಿ) ಸಗಟು ಖರೀದಿ ಪದ್ದತಿ ಬಗ್ಗೆಯೂ ಹೆಚ್ಚಿನ ವಾದ, ವಿವಾದ, ಟೀಕೆ ಮತ್ತು ಆರೋಪಗಳಿವೆ. ಈ ವ್ಯವಸ್ಥೆಯಲ್ಲಿ ಓದುಗರಿಗೆ ಬೇಕಾದ ಪುಸ್ತಕಗಳನ್ನು ಬೇಕಾದ ಗ್ರಂಥಾಲಯಗಳಿಗೆ ಬೇಕೆನಿಸಿದಾಗ ಕೊಳ್ಳುವುದಕ್ಕೆ ಅವಕಾಶವಿಲ್ಲ. ಬದಲಾಗಿ ಇದು ಪ್ರಕಟಿತ ಕನ್ನಡ ಪುಸ್ತಕಗಳಿಗೆ ಒಂದು ಸಹಾಯಧನ (subsidy) ಮಾರ್ಗವಾಗಿ ಬೆಳೆದು ಬಂದಂತೆ ಮತ್ತು ಲೇಖಕರು, ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು ತಮ್ಮ ಪುಸ್ತಕಗಳಿಗೆ ಈ ಸಹಾಯಧನ ರೂಪದ ಸಗಟು ಖರೀದಿ order ಗಿಟ್ಟಿಸಲು ಹಾತೊರೆಯುತ್ತಿರುವಂತೆ ತೋರುತ್ತದೆ. ಪುಸ್ತಕೋದ್ಯಮ ಚಟುವಟಿಕೆಯಿರುವ ನಗರಗಳಲ್ಲಿ ಮಾತ್ರ ಉನ್ನತ ಸಮಿತಿಯ ಸಗಟು ಖರೀದಿ ಮಾಡುವುದಾದರೆ ಅಧಿಕಾರ ಕೇಂದ್ರೀಕೃತಗೊಳಿಸಿ ಪಟ್ಟಭಧ್ರಹಿತಾಸಕ್ತಿಗಳಿಗೆ ಉತ್ತೇಜನ ಕೊಟ್ಟಂತಾಗುತ್ತದೆ. ಕನಿಷ್ಠ ಜಿಲ್ಲಾ ಮಟ್ಟಕ್ಕಾದರೂ ವಿಕೇಂದ್ರೀಕರಣಗೊಳಿಸಬೇಕು. ಜಿಲ್ಲಾ ಖರೀದಿ ಸಮಿತಿಗಳು ಸಭೆ

---

* *ಹೆಚ್. ಎ. ಖಾನ್ ಅವರು ಪುಸ್ತಕ ಸಂಗ್ರಹಣೆಯ ಗುಣಮಟ್ಟ ಮತ್ತು ಪ್ರಸ್ತುತೆಯನ್ನು ಪ್ರಶ್ನಿಸಿದರೆ, ರಾಮಕೃಷ್ಣಗೌಡ ಅವರು ಕೇವಲ ಶೇ. ೨ ಕ್ಕೂ ಕಡಿಮೆ ಗ್ರಂಥಗಳು ತುಂಬ ಚೆನ್ನಾಗಿವೆ ಅಥವ ತುಂಬ ಉಪಯುಕ್ತವಾಗಿವೆ ಎಂದೂ, ಶೇ. ೫೫ ಕೆಟ್ಟದ್ದಾಗಿವೆ ಎಂದೂ ಮತ್ತು ಶೇ. ೪೦ ಅಪ್ರಯೋಜಕ ಎಂದೂ ನಿರ್ಧರಿಸಿದ್ದಾರೆ. ಎ. ವೈ. ಆಸುಂದಿ ಮತ್ತು ಜೇಮ್ಸ್ ಪಿಟ್ಜಮನ್ ಅವರು ಶೇ. ೪೮ ಓದುಗರು ಪುಸ್ತಕಗಳು ಅಲಭ್ಯ*

*ಎಂದೂ, ಶೇ. ೬೪ ಮಂದಿ ಪುಸ್ತಕಗಳು ಹಳತು ಮತ್ತು ಅಪ್ರಯೋಜಕ ಎಂದೂ ಮತ್ತು ಅತೀ ಹೆಚ್ಚು ಮಂದಿ ಓದುಗರು ಪುಸ್ತಕ ಸಂಗ್ರಹಣೆಯನ್ನು ಬಲಪಡಿಸಬೇಕೆಂದು ಸೂಚಿಸಿರುವುದಾಗಿ ವರದಿ ಮಾಡಿದ್ದಾರೆ.*

ಸೇರದೆಯೂ ಆಯ್ಕೆ ನಡೆಸಬಹುದು. ಹಿರಿಯ ಸಾಹಿತಿಗಳ ಪುಸ್ತಕಗಳನ್ನು ಇಂತಹ ಸಮಿತಿಯಲ್ಲಿ ಬೇರೆಯವರು ಆಯ್ಕೆ ಮಾಡಿದರೆ ಅದು ಸಾಹಿತಿಗಳಿಗೆ ಮಾಡುವ ಅವಮಾನ, ಸಾಹಿತ್ಯ ಕ್ಷೇತ್ರದಲ್ಲಿ ಗ್ರಂಥಾಲಯದ ಹಸ್ತಕ್ಷೇಪ ಎಂಬ ಭಾವನೆಗಳು ಸಾಧುವಲ್ಲ. ವಿವಿಧ ಭಾಷೆ, ವಿಷಯ ಮತ್ತು ದೇಶಗಳ ಹಾಲಿ ಇರುವ ಮತ್ತು ಹಿಂದಿನ ಕೃತಿಗಳನ್ನು ಒಂದು ಸ್ಥಳೀಯ ಸಾಧಾರಣ ಗ್ರಂಥಾಲಯ ಆಯ್ಕೆ ಸಮಿತಿ ಆಯ್ಕೆ ಮಾಡುವುದಿರಲಿ, ಅಲ್ಲಿನ ಓದುಗರ ಅಭಿರುಚಿಗೆ ಒಗ್ಗದ ಅಥವ ಸಂಪನ್ಮೂಲ ಸಾಲದಿದ್ದಲ್ಲಿ ಆಯ್ಕೆ ಮಾಡದೆಯೂ ಇರಬಹುದು. ಇದು ಪುಸ್ತಕಗಳ ಮೌಲ್ಯೀಕರಣವಲ್ಲ. ಉಪಯುಕ್ತತೆ, ಓದುಗರ ಅಭಿರುಚಿ ಮತ್ತು ಗ್ರಂಥಾಲಯಗಳ ಧ್ಯೇಯಗಳಿಗೆ ಸಂಬಂಧಿಸಿದ ವಿಷಯ. ಹೀಗಾಗಿ ಇರುವ ಅತ್ಯಲ್ಪ ಸಂಖ್ಯೆಯ ಓದುಗರ ಸಲಹೆ, ಬೇಡಿಕೆ ಮತ್ತು ಅನಿಸಿಕೆಗಳಿಗೆ ಆದರದ ಪ್ರೋತ್ಸಾಹವಿಲ್ಲವಾಗಿದೆ. ಕೇಂದ್ರೀಕೃತ ಸಗಟು ಖರೀದಿಯಿಂದ ಪ್ರಕಾಶಕರಿಗೆ ಅನುಕೂಲ ಮತ್ತು ಲಾಭವಿರುವುದರಿಂದ ಅವರ ಸಮ್ಮತಿಯಿದೆ. ಒಂದೇ ಉನ್ನತ ಸಮಿತಿ ಆಯ್ಕೆ ಮಾಡುವುದರಿಂದ ಹಲವಾರು ಆಯ್ಕೆ ಸಮಿತಿ ಅಥವ ಗ್ರಂಥಾಲಯಗಳಿಗೆ ಅರ್ಜಿ ಸಲ್ಲಿಸುವುದು ತಪ್ಪುತ್ತದೆ. ವಾಸ್ತವವಾಗಿ ಪುಸ್ತಕಗಳ ಆಯ್ಕೆ ಅರ್ಜಿ ಇಲ್ಲದೆಯೂ ನಡೆಯಬೇಕು. ಅಲ್ಲದೆ, ಸ್ಥಳೀಯ ಸಾಧಾರಣ ಮಾರಾಟಗಾರರಿಂದಲೂ ಪುಸ್ತಕ ಕೊಳ್ಳುವಂತಿರಬೇಕು. ಕನ್ನಡ ಪುಸ್ತಕಗಳ ವಿತರಣೆ ಮತ್ತು ಮಾರಾಟ ಜಾಲ ಶಿಥಿಲವಾಗಲು ಕೇಂದ್ರೀಕೃತ ಸಗಟು ಖರೀದಿಯೂ ಒಂದು ಕಾರಣ. ವಿಚಿತ್ರವೆಂದರೆ ಸಗಟು ಖರೀದಿ ಸಮಿತಿ ಅಧ್ಯಕ್ಷರೂ ಆಗಿದ್ದ ಮಾಜಿ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೊಬ್ಬರು “ಗ್ರಂಥಾಲಯಗಳಿಗಾಗಿ ಸರ್ಕಾರ ಯೋಜಿಸಿರುವ ಸಗಟು ಪುಸ್ತಕ ಖರೀದಿ ಪ್ರಕ್ರಿಯೆಯನ್ನು ಪುಸ್ತಕ ಪ್ರಾಧಿಕಾರಕ್ಕೆ ವಹಿಸಬೇಕು” ಎಂದು ಆಗ್ರಹಿಸುವ ಮೂಲಕ ಗ್ರಂಥಾಲಯ ಕ್ಷೇತ್ರಕ್ಕೆ ಸ್ಪಷ್ಟ ಹಸ್ತಕ್ಷೇಪ ಮಾಡಿದ್ದಾರೆ.

ಆಶ್ಚರ್ಯವೆಂದರೆ ಗ್ರಂಥಪಾಲಕರೊಬ್ಬರು ಪ್ರಕಟಿತ ಪುಸ್ತಕಗಳ (ಅಂದರೆ ವರ್ಷಕ್ಕೆ ಪ್ರಕಟವಾಗುವ ಸುಮಾರು ೧೨೦೦ ಕನ್ನಡದ ಹೊಸ ಶೀರ್ಷಿಕೆಗಳ) ೪೦೦ ಪ್ರತಿಗಳನ್ನು ಎಲ್ಲ ೪೦೦ (ಮುಖ್ಯ) ಸಾರ್ವಜನಿಕ ಗ್ರಂಥಾಲಯಗಳಿಗೂ ಸಗಟು ಖರೀದಿಸುವ ಸರಳ ಸೂತ್ರವನ್ನು ಮುಂದಿಟ್ಟು ಲೇಖಕರ, ಪ್ರಕಾಶಕರ ಮತ್ತು ಪುಸ್ತಕ ಮಾರಾಟಗಾರರ ಪ್ರತಿಭಟನೆಯನ್ನು ಶಮನಗೊಳಿಸಲು ಪ್ರಯತ್ನಿಸಿದರು. ಇದಕ್ಕಾಗಿ ಸರ್ಕಾರದಿಂದ ಹೆಚ್ಚಿನ ಹಣವನ್ನು ಕೋರುವ ಸಲಹೆ ಕೊಟ್ಟಿದ್ದರು. ಪುಸ್ತಕಗಳ ಆಯ್ಕೆಕ್ರಮ ಇರುವುದೇ ಬೇಕೆನ್ನಿಸುವಷ್ಟು ಸಂಪನ್ಮೂಲ ಇಲ್ಲದಿರುವುದು ಮತ್ತು ಎಲ್ಲರಿಗೂ (ಎಲ್ಲ ಗ್ರಂಥಾಲಯಗಳಿಗೂ) ಎಲ್ಲ ಪುಸ್ತಕಗಳು ಬೇಕಿಲ್ಲವಾದ್ದರಿಂದ, ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳನ್ನೂ ಎಲ್ಲ ಗ್ರಂಥಾಲಯಗಳಿಗೂ ಸಗಟಾಗಿ ಖರೀದಿಸುವುದು ಸಮಸ್ಯೆಗೆ ಪರಿಹಾರವಲ್ಲ. ಈ ರೀತಿ ಮಾಡಿದರೆ ಆಯ್ಕೆಯೆ ಇಲ್ಲವಾದಂತಾಗಿ, ಓದುಗರ ಮತ್ತು ಸ್ಥಳೀಯ ಬೇಕುಬೇಡಗಳನ್ನು ನಿರ್ಲಕ್ಷಿಸಿದಂತಾಗುವುದಲ್ಲದೆ ಸೀಮಿತ ಸಂಪನ್ಮೂಲ ಪೋಲಾಗುತ್ತದೆ. ಬದಲಾಗಿ ಸಗಟು ಖರೀದಿಯನ್ನೇ ನಿಲ್ಲಿಸಿ, ವಿಕೇಂದ್ರೀಕೃತ ಆಯ್ಕೆ ಮಾರ್ಗ ಅನುಸರಿಸಿದರೆ ಪ್ರಾದೇಶಿಕವಾಗಿ ಎಲ್ಲ ವರ್ಗದವರಿಗೆ (ಓದುಗರಿಗೆ, ಲೇಖಕರಿಗೆ, ಪ್ರಕಾಶಕರಿಗೆ, ಗ್ರಂಥಾಪಾಲಕರಿಗೆ) ಆಯ್ಕೆಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತಾಗಿ, ಗ್ರಂಥ ಸಂಗ್ರಹಣೆ ಒಂದು ಗ್ರಂಥಾಲಯದಿಂದ ಇನ್ನೊಂದಕ್ಕೆ ಸಾಕಷ್ಟು ಭಿನ್ನವಾಗಿದ್ದು ಹೆಚ್ಚು ಉಪಯುಕ್ತವಾಗುವ ಸಾಧ್ಯತೆಗಳಿವೆ. ಅಲ್ಲದೆ ಪ್ರತಿ ಗ್ರಂಥಾಲಯದ ಬೇಡಿಕೆಯನ್ನು ಆಗಾಗ್ಗೆ ಗಮನಿಸಿ ಪುಸ್ತಕಗಳನ್ನು ಒಂದು ಗ್ರಂಥಾಲಯದಿಂದ ಬೇಕಾದ ಮತ್ತೊಂದು ಗ್ರಂಥಾಲಯಕ್ಕೆ ಸುಲಭವಾಗಿ ವರ್ಗಾಯಿಸುವ ಪದ್ಧತಿಯನ್ನೂ ರೂಢಿಗೆ ತರಬೇಕು.

***ಪುಸ್ತಕಗಳ ಬಳಕೆ ಮತ್ತು ಬೇಡಿಕೆಗಳ ಅಂಕಿಅಂಶಗಳು :*** ಮುಖ್ಯವಾಗಿ ಪುಸ್ತಕಗಳ ಉಪಯೋಗ ಮತ್ತು ಬೇಡಿಕೆಗಳ ಅಂಕಿಅಂಶಗಳನ್ನು ಎಲ್ಲ ಸಾರ್ವಜನಿಕ ಗ್ರಂಥಾಲಯಗಳು ಸಂಗ್ರಹಿಸಿ ಸಮಿತಿ ಮತ್ತು ಓದುಗರ ಗಮನಕ್ಕೆ ತರುತ್ತಿರಬೇಕು. ಈ ನಿಟ್ಟಿನಲ್ಲಿ ತುಂಬ ಸ್ಥೂಲವಾದ ಅಂಕಿ ಅಂಶಗಳು ದಾರಿ ತಪ್ಪಿಸಲೂ ಬಹುದು. ಉದಾಹರಣೆಗೆ, ಈ ಹಿಂದೆ ದಿನಪತ್ರಿಕೆಯೊಂದರ ವರದಿಯಂತೆ ಬೆಂಗಳೂರಿನ ಕೇಂದ್ರ ವಲಯದ ವ್ಯಾಪ್ತಿಯಲ್ಲಿನ ಸಾರ್ವಜನಿಕ ಗ್ರಂಥಾಲಯಗಳ ಸಾಧನೆಯ ಅಂಕಿಅಂಶಗಳು ಹೀಗಿದ್ದು ಮೇಲ್ನೋಟಕ್ಕೆ ಸಂತಸ ತರುವಂತಿವೆ. "ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ, ಇಲ್ಲಿಯ ಗ್ರಂಥಾಲಯಗಳು ಗಮನಾರ್ಹ ರೀತಿಯಲ್ಲಿ ಮುನ್ನಡೆ ಸಾಧಿಸಿವೆ" ಎನ್ನುವಾಗ ಯಾವ ರಾಜ್ಯದ ಗ್ರಂಥಾಲಯಗಳಿಗೆ ಹೋಲಿಸುತ್ತಿದ್ದೇವೆ, ಅಲ್ಲಿನ ಅಂಕಿಅಂಶಗಳೇನು ಎನ್ನುವುದನ್ನು ವಿಷದಪಡಿಸುವುದು ಸೂಕ್ತ. ಬೆಂಗಳೂರಿನ ಕೇಂದ್ರ ವಲಯದ ಸಾರ್ವಜನಿಕ ಗ್ರಂಥಾಲಯಗಳಿಗೆ ಆಗ ೧೫,೫೭೦ ಸದಸ್ಯರಿದ್ದು, ಪ್ರತೀ ದಿನ ಸುಮಾರು ೩೧೦೦ ಓದುಗರು ಭೇಟಿ ನೀಡಿ, ೬೧೧ ಗ್ರಂಥಗಳನ್ನು ಎರವಲು ಪಡೆಯುತ್ತಾರೆ ಎಂದು ಹೇಳಲಾಗಿತ್ತು. ಕುತೂಹಲದ ಸಂಗತಿಯೆಂದರೆ ಗುಣಲಕ್ಷಣಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳಿಗೆ ತುಂಬ ಹೋಲುವ ನಗರದ ಕೇಂದ್ರದಲ್ಲಿಯೇ ಇರುವ ಬ್ರಿಟೀಷ್ ಗ್ರಂಥಾಲಯದ

ಬೆಂಗಳೂರಿನ ಒಂದು ಪುಟ್ಟ ಶಾಖೆ ಬಹಳ ಕಿರಿದಾದ (ಆದರೆ ಸೊಗಸಾಗಿ ಅಳವಡಿಸಿದ) ಕಟ್ಟಡದಲ್ಲಿದ್ದು, ಕೇವಲ ೨೨,೦೦೦ ಗ್ರಂಥಗಳು ಮತ್ತು ಬೆರಳೆಣಿಕೆಯಷ್ಟು ಸಿಬ್ಬಂದಿ ಹೊಂದಿದ್ದರೂ, ವರ್ಷಕ್ಕೆ ರೂ. ೭೦೦ ಶುಲ್ಕ ವಿಧಿಸಿಯೂ ಸುಮಾರು ೭೫೦೦ ಸದಸ್ಯರನ್ನು ಪಡೆದುಕೊಂಡಿದ್ದು, ಈ ಗ್ರಂಥಾಲಯಕ್ಕೆ ದಿನವೂ ೬೦೦ ಸದಸ್ಯರು ಬೇಟಿ ನೀಡಿ ಸುಮಾರು ೧೦೦೦ ಗ್ರಂಥಗಳನ್ನು ಎರವಲು ಪಡೆಯುತ್ತಾರೆ.  ಈ ಗ್ರಂಥಾಲಯದ ಅರ್ಧದಷ್ಟು ಗ್ರಂಥಗಳು ಯಾವಾಗಲೂ ಎರವಲು  ರೂಪದಲ್ಲಿ ಗ್ರಂಥಾಲಯದ ಹೊರಗೆ ಸದಸ್ಯರ ಬಳಿ ಇರುತ್ತವೆ. ಭಾಷೆ, ಶುಲ್ಕ ಮತ್ತು ಪ್ರವೇಶ ನಿರ್ಬಂಧಗಳಿದ್ದೂ  ಒಂದು ಪುಟ್ಟ ಬ್ರಿಟೀಷ್ ಗ್ರಂಥಾಲಯದ ಶಾಖೆಯಿಂದ ದಿನಕ್ಕೆ ೧೦೦೦ ಪುಸ್ತಕಗಳನ್ನು ಎರವಲು ಪಡೆದ ಬೆಂಗಳೂರಿಗರು ಪುಕ್ಕಟೆ ಲಭ್ಯವಿರುವ ಹಲವು ಬಾಷೆಗಳ ೩ ಲಕ್ಷಕ್ಕೂ ಹೆಚ್ಚು ಪುಸ್ತಕಗಳಿರುವ ೧೭ ಸಾರ್ವಜನಿಕ ಗ್ರಂಥಾಲಯಗಳಿಂದ  (ಕೇಂದ್ರ ವಲಯದ ಮುಖ್ಯ ಗ್ರಂಥಾಲಯ ಮತ್ತು ಇದರ ವ್ಯಾಪ್ತಿಯಲ್ಲಿನ ೧೬ ಶಾಖಾ ಗ್ರಂಥಾಲಯಗಳಿಂದ) ದಿನಕ್ಕೆ ಕೇವಲ ೬೧೦ ಪುಸ್ತಕಗಳನ್ನು ಎರವಲು ಪಡೆಯುತ್ತಾರೆ!  ಇಂತಹ  ಅಂಕಿಅಂಶಗಳನ್ನು ಸರಿಯಾದ ಹಿನ್ನೆಲೆಯಲ್ಲಿ ಗ್ರಹಿಸದೆ ಪ್ರತ್ಯೇಕಿಸಿ ನೋಡಿದರೆ ಅವು ದಾರಿ ತಪ್ಪಿಸಲೂ ಬಹುದು.  ಮುನ್ನಡೆ ಅಥವ ಸಾಧನೆಯನ್ನು ಗುರುತಿಸಲು ಮತ್ತು ಈ ಅಂಕಿಅಂಶಗಳಿಗೆ ಸರಿಯಾದ ಅರ್ಥ ಬರಬೇಕಿದ್ದರೆ ಜನಸಂಖ್ಯೆಯಲ್ಲಿ ಸದಸ್ಯತ್ವದ ಪ್ರಮಾಣ (ಗ್ರಾಹಕರನ್ನು ತಲುಪುವ ಪ್ರಮಾಣ), ಒಟ್ಟು ಗ್ರಂಥಗಳಲ್ಲಿ ಎರವಲು ಪಡೆದ ಗ್ರಂಥಗಳ ಪ್ರಮಾಣ ಮತ್ತು ಈ ಎರಡೂ ಪ್ರಮಾಣಗಳನ್ನು ಇತರ  ಗ್ರಂಥಾಲಯಗಳ ಇಂತಹುದೆ ಪ್ರಮಾಣಗಳೊಂದಿಗೆ ಅಥವ ನಿಗದಿತ ಗುಣ ಮಟ್ಟದೊಂದಿಗೆ ಮತ್ತು ಇದೇ ಗ್ರಂಥಾಲಯಗಳ ಹಿಂದಿನ ವರ್ಷಗಳ ಪ್ರಮಾಣಗಳಿಗೆ ಹೋಲಿಸುವುದು ಗ್ರಂಥಾಲಯಗಳ ಮುನ್ನಡೆ, ದಕ್ಷತೆ ಮತ್ತು ಸಮರ್ಥತೆಯನ್ನು ಅರಿಯಲು ನೆರವಾಗುತ್ತದೆ.

**ಉಪಸಂಹಾರ:** ಗ್ರಂಥಾಲಯಗಳಿಗೆ ಪುಸ್ತಕಗಳ ಆಯ್ಕೆ ಪುಸ್ತಕಗಳ ಮೌಲ್ಯೀಕರಣವಲ್ಲ. ಓದುಗರ ಸಮಂಜಸ ಬೇಡಿಕೆಗಳು ಮತ್ತು ಗ್ರಂಥಾಲಯದ ಸಂಪನ್ಮೂಲದ ಮಿತಿಯಲ್ಲಿ ಪುಸ್ತಕಗಳ ಆಯ್ಕೆಯನ್ನು ಅತೀ ಹೆಚ್ಚು ಓದುಗರನ್ನು ತೃಪ್ತಿಪಡಿಸುವ ದೃಷ್ಠಿಯಿಂದ ಮಾಡಬೇಕು. ಆಯ್ಕೆ ಪಾರದರ್ಶಕವಾಗಿ ಎಲ್ಲರಿಗೂ ತಿಳಿಯಪಡಿಸಿದ ಒಂದು ಪ್ರಜಾಪ್ರಭುತ್ವ ನೀತಿಯ ಮೇಲೆ ಮಾರುಕಟ್ಟೆಯಲ್ಲಿ ಲಭ್ಯವಿರುವ ಎಲ್ಲ ಪುಸ್ತಕಗಳಿಗೂ ಪರಿಶೀಲನೆಗೆ ಸಮಾನ ಅವಕಾಶ ಕಲ್ಪಿಸಿ ಈಗಾಗಲೇ ಗ್ರಂಥಾಲಯದಲ್ಲಿ ಬಳಕೆಯಾಗುತ್ತಿರುವ ಅಥವ ಆಗದ ಪುಸ್ತಕ ಸಂಗ್ರಹದ ಅಂಕಿ ಅಂಶಗಳ ಆಧಾರದ ಮೇಲೆ ನಡೆಯಬೇಕು. ಪುಸ್ತಕೋದ್ಯಮ ಕೇಂದ್ರೀಕೃತ ಸಗಟು ಖರೀದಿಯನ್ನು ಒಂದು ಸರಕಾರೀ ಧನ ಸಹಾಯವಾಗಿಸಿ ಗ್ರಂಥಾಲಯ ಸೇವೆಯನ್ನು ಈ ದನಸಹಾಯದ ಅಧೀನ ಕ್ರಿಯೆಯನ್ನಾಗಿಸತೊಡಗಿದೆ. ಗ್ರಂಥಾಲಯಗಳು ಮತ್ತು ಓದುಗರು ಪುಸ್ತಕೋದ್ಯಮಕ್ಕಾಗಿ ಅಲ್ಲ. ಓದುಗರ ಹಿತವನ್ನು ಪುಸ್ತಕೋದ್ಯಮ ಗುತ್ತಿಗೆ ತೆಗೆದುಕೊಂಡಂತೆ ಭಾವಿಸದೆ ಪುಸ್ತಕಗಳ ವ್ಯವಸ್ಥಿತ ವ್ಯಕ್ತಿಗತ ಮಾರಾಟಕ್ಕೆ ಹೆಚ್ಚು ಒತ್ತು ನೀಡುವಂತಾಗಬೇಕು. ಇಂತಹ ಪಟ್ಟಭದ್ರಹಿತಾಸಕ್ತಿಯಿಂದ ಮುಕ್ತವಾದ ಪುಸ್ತಕಗಳ ಆಯ್ಕೆ ಕೇವಲ ಓದುಗರ ದೃಷ್ಠಿಯಿಂದಷ್ಟೇ ನಡೆಯಬೇಕು. ಓದುಗರು ಮುಟ್ಟದ ಕಪಾಟಿನಲ್ಲಿ ಧೂಳು ತಿನ್ನುತ್ತಿರುವ ಪುಸ್ತಕಗಳನ್ನು ಪಟ್ಟಿಮಾಡಿ ಅವುಗಳನ್ನು ಪ್ರಕಟಿಸಿ ಗ್ರಂಥಾಲಯಗಳಿಗೆ ತುಂಬಿದವರ ಬಗ್ಗೆ ಅವರ ಮುಂದಿನ ಪುಸ್ತಕಗಳ ಆಯ್ಕೆಯಲ್ಲಿ ಎಚ್ಚರ ವಹಿಸುವುದು ಸೂಕ್ತ.

---

## ಲೇಕಖರ ವಿವರ



ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ೩೬ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, ೧೯೭೮ ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್ ಅವರು ೪  ಪುಸ್ತಕಗಳು ಮತ್ತು ೮೮ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪತ್ಯಗಳನ್ನೂ ಬರೆದಿದ್ದಾರೆ. ಇವರು ಮುಕ್ತ ವಿಶ್ವವಿದ್ಯಾನಿಲಯಗಳ ಗ್ರಂಥಾಲಯ ಮತ್ತು ಮಾಹಿತಿ

ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ೧೯ ಪಠ್ಯ ಸಾಮಾಗ್ರಿಯನ್ನು ರಚಿಸಿದ್ದಾರೆ. ಇದಲ್ಲದೆ ಸುಮಾರು ೪೫ ಲೇಖನ/ ಪ್ರವಚನಗಳನ್ನು ವಿವಿಧ ಸಮ್ಮೇಳನ / ವಿಚಾರ ಸಂಕಿರಣಗಳಲ್ಲಿ ಮಂಡಿಸಿದ್ದಾರೆ.

**E-mail:** sridharmirle@yahoo.com, mirlesridhar@gmail.com, sridhar@isac.gov.in **;**
**Phone:** 91-80-25084451; **Fax:** 91-80-25084476.